# ಬೆಳೆಯುವುದೆಂದರೆ...

ಮನೆಯಲ್ಲಿ ಸೂತಕ. ಅಪ್ಪ ಕಣ್ಮುಚ್ಚಿ ಮೂರೇ ದಿನ ಆಗಿತ್ತು. ಸಿನಿಮಾ ನಿರ್ಮಾಪಕರು ಫೋನ್ ಮಾಡಿ, ಶೆಡ್ಯೂಲು ರೆಡಿಯಾಗಿದೆ ಎಂದರು. ನಿರ್ದೇಶಕರು ಮನೆ ಬಾಗಿಲು ತಟ್ಟಿದರು. ಬಣ್ಣಹಚ್ಚಲು ಮನಸ್ಸಿಗೆ ಇಷ್ಟವಿಲ್ಲ. ಆದರೂ ವಿಧಿಯಿಲ್ಲ. ಅಪ್ಪ ಕೂಡ ಅದೇ ಕ್ಷೇತ್ರದ ಭಾವ ನೋವುಗಳನ್ನು ಕ್ಯಾಮೆರಾದಲ್ಲಿ ತುಂಬಿ ಪ್ರೇಕ್ಷಕರಿಗೆ ಕೊಟ್ಟವರೇ. ಅಕಸ್ಮಾತ್ತಾಗಿ ಒಮ್ಮೆ ಆದ ತಾಂತ್ರಿಕ ಅಚಾತುರ್ಯದಿಂದ ಇಡೀ ಸಿನಿಮಾ ಒಟ್ಟಾರೆ ಬೇರೆ ಬಣ್ಣದಲ್ಲೇ ಕಂಡು, ವಿಪರೀತ ಹಿಟ್ ಆಗಿತ್ತು. ಅವರು ಮಾತ್ರ ತಮ್ಮನ್ನು ತಾವು 'ಯೆಲ್ಲೋ ಯೆಲ್ಲೋ ಡರ್ಟಿ ಫೆಲೋ' ಎಂದು ಗೇಲಿ ಮಾಡಿಕೊಂಡಿದ್ದರು. ಆಪ್ತೇಷ್ಟರು ಆ ಸಿನಿಮಾಟೊಗ್ರಫರನ್ನು ಹೆಸರಿಗೆ ತಕ್ಕಂತೆ ಗೌರಿಶಂಕರದಂಥ ವ್ಯಕ್ತಿತ್ವ ಎಂದೇ ಹೊಗಳುತ್ತಿದ್ದರು.

ಅಂಥವರ ಮಗಳು ನಟಿಯಾದದ್ದು ಆಕಸ್ಮಿಕ. ಬೆಳೆದದ್ದು ಸ್ವಯಂ ಪ್ರತಿಭೆಯಿಂದ. ತಂದೆಯ ಹೆಸರಿನ ಬಲವನ್ನು ಮೀರಿ ಬೆಳೆದ ನಟಿ ಯಾವುದೇ ಉಡುಗೆ ತೊಡಲು ಒಲ್ಲೆ ಎಂದವರಲ್ಲ. ಅವರಿಗೆ ಸ್ಪರ್ಧಿ ಎಂದೇ ಬಿಂಬಿಸಲಾಗಿದ್ದ ಎರಡಕ್ಷರದ ಹೆಸರಿನ ಇನ್ನೊಬ್ಬ ನಟಿ ಬೆಳೆಯಬೇಕೆಂಬ ಏಕೈಕ ಕಾರಣಕ್ಕೆ ಎಂತೆಂಥದೋ ಬಟ್ಟೆ ತೊಡುವಷ್ಟು ಅಗ್ಗ ತಾವಲ್ಲ ಎನ್ನುವ ಮೂಲಕ ಮೂರಕ್ಷರದ ಹೆಸರಿನ ಈ ನಟಿಯನ್ನು ಪರೋಕ್ಷವಾಗಿ ಕೆಣಕಿದ್ದರು. ಅದಕ್ಕೆ ಜಗ್ಗದ ಕುಗ್ಗದ  ಈ ನಟಿ ತಮಗಿಂತ ಸಾಕಷ್ಟು ನೀಳಕಾಯದ ನಟನ ಜೊತೆ ಬಿಂದಾಸ್ ಆಗಿ ಕುಣಿದರು. ಕೆಣಕಿದ್ದ ಆ ನಟಿಯ ಜೊತೆಗೇ ಒಂದು ಸಂಗೀತಮಯ ಚಿತ್ರದಲ್ಲಿ ತೆರೆಹಂಚಿಕೊಂಡರು.

ನಟಿಯ ಬೆಳವಣಿಗೆಯ ಗ್ರಾಫು ಉತ್ತಮವಾಗಿಯೇ ಇತ್ತು. ಅಷ್ಟರಲ್ಲೇ ಅವರ ಮದುವೆಯ ವಿಷಯದಲ್ಲಿ ಗುಲ್ಲೆದ್ದಿತು. ಕನ್ನಡ ಚಿತ್ರರಂಗಕ್ಕೆ ಲಾಂಗು, ಮಂಚು ಪರಂಪರೆಯನ್ನು ಮತ್ತೆ ಎಳೆದು ತಂದಿದ್ದ ನಿರ್ದೇಶಕರನ್ನು ಅವರು ಮೆಚ್ಚಿದರು. ವಾಹಿನಿಯೊಂದರಲ್ಲಿ ಇಬ್ಬರ ಮದುವೆ ನೇರಪ್ರಸಾರವಾದದ್ದು ವಿಶೇಷ. ಮದುವೆಗಿಂತ ಮೊದಲು 'ಪಗ್' ನಾಯಿಯನ್ನು ತುಂಬಾ ಹಚ್ಚಿಕೊಂಡಿದ್ದ ನಟಿ ಆಮೇಲೆ ನಿರ್ದೇಶಕರಿಗೆ ಪ್ರೀತಿಯ ಮಳೆಗರೆದರೋ ಇಲ್ಲವೋ ಎಂಬುದು ಜಿಜ್ಞಾಸೆ. ಯಾಕೆಂದರೆ ಇಬ್ಬರ ನಡುವೆ ಸಂಬಂಧ ಹಳಸಿಹೋಗಿದೆ ಎಂಬ ಸುದ್ದಿ ಆಗೀಗ ಹೊಗೆಯಾಡುತ್ತಲೇ ಇದೆ.

ಇಷ್ಟರ ನಡುವೆಯೇ ನಟೀಮಣಿ ನಿರ್ಮಾಪಕಿಯಾದರು. ದೊಡ್ಡ ಬಜೆಟ್‌ನ ಇನ್ನೊಂದು ಲಾಂಗು ಮಚ್ಚಿನ ಸಿನಿಮಾ ನಿರ್ಮಿಸಿದರು. ಲಾಂಗು ಹಿಡಿದೂ ಹಿಡಿದೂ ಕೈಪಳಗಿದ್ದ ನಾಯಕನನ್ನೇ ಆ ಪಾತ್ರಕ್ಕೆ ಒಪ್ಪಿಸಿದರು. ಮುಹೂರ್ತವಂತೂ ಅದ್ದೂರಿಯಾಗಿ ನಡೆಯಿತು. ಪಕ್ಕದ ರಾಜ್ಯಗಳ ಘಟಾನುಘಟಿ ನಟ–ನಟಿಯರೆಲ್ಲಾ ಬಂದು ನಗು ಚೆಲ್ಲಿ ಹೋದರು. ಆ ಸಿನಿಮಾ ದಯನೀಯವಾಗಿ ಸೋತರೂ ನಿರ್ಮಾಪಕಿಯಾಗಿ ನಟಿ ಸೋಲಲಿಲ್ಲ. ವಿತರಣೆಯ ಹಕ್ಕು ಪಡೆದ ಮಹಾನುಭಾವರೊಬ್ಬರು ಹೆಗಲ ಮೇಲಿನ ಬಟ್ಟೆಯನ್ನು ತಲೆಮೇಲೆ ಹಾಕಿಕೊಳ್ಳುವಂತಾಯಿತು.

ಈಗ ನಟೀಮಣಿ ಸಾಕಷ್ಟು ದಪ್ಪಗಾಗಿದ್ದಾರೆ. ರಾಜಕೀಯದೊಳಗೂ ಒಂದು ಕಾಲಿಟ್ಟಿದ್ದಾರೆ. ಅವರ ನಿರ್ದೇಶಕ ಪತಿ ನಟನೆಯ ದಾರಿಗೆ ಹೊರಳಿದ್ದಾರೆ. ಸಂಸಾರದ ವಿಷಯ ಗುಟ್ಟಾಗಿ ಉಳಿದಿದೆ!

–ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68